ಹಾದಿ. ಕೈತುಂಬಾ ಹಣ ಕೊಡುವಾಗ ಮಾಲೀಕ ಹೇಗೆ ಪ್ರೀತಿಯಿಂದ ಮಾತನಾಡಿದ್ದ: 'ಲಾಭಕ್ಕಾಗಿ ನಾನು ಈ ಕೆಲಸ ಮಾಡ್ತಿಲ್ಲ, ಮರ್ಯಾದೆ ಹೋಗ್ಬಾರ್ದು ಅಷ್ಟೇ. ಇದೊಂದು ಆದಕೂಡಲೇ ಬೆಳಿಗ್ಗೆಯಿಂದಾನೇ ಕೂಲಿಗಿಳೀಬೇಕು ನೀವು. ಇನ್ನೊಂದ್ ತಿಂಗ್ಳು ಈ ಹತ್ತಿ ತೋಟ ಸಪಾಟು ಮಾಡಿಬಿಡಿ' ವ್ಯಾನ್ ನಿಲ್ಲುವಂತೆ ತೋರುತ್ತಿತ್ತು, ಹೌದು ಕುಲುಕಾಡಿಕೊಂಡು ನಿಂತುಹೋಯಿತು, ಅವರೇ ನಿಲ್ಲಿಸಿಕೊಂಡಿರಬೇಕು. ಕಿಟಕಿಯಿಂದ ನೋಡಿದಳು, ಮಾಲೀಕನ ಚೇಲಗಳು ಬೀಡಿ ಸೇದುತ್ತಾ, ಏನೇನೋ ಮಾತನಾಡಿಕೊಂಡು ಮೂತ್ರ ಮಾಡುತ್ತಿದ್ದರು. ಇವರಲ್ಲೊಬ್ಬಳು, 'ನಾವೂ ಈಚೆ ಹೋಗ್ಬೇಕು' ಕೂಗಿ ಹೇಳಿದಳು. 'ಆಸ್ಪತ್ರೆ ಬಂತಲ್ಲ, ಇನ್ನೇನು' ಅತ್ತಕಡೆ ಉತ್ತರಕ್ಕೆ ಮರುಪ್ರಶ್ನೆ, ಬಂದ್ಮೇಲೆ ನೋಡನ' ಅನ್ನುತ್ತ ಅವಳು ಇಳಿದೇಬಿಟ್ಟಳು. ಅವಳ ಹಿಂದೆ ಐದಾರು ಜನ ಹೆಣ್ಣುಗಳು ಇಳಿದುಹೋದರು. ಭೀಮವ್ವ ಮಾತ್ರ ಕಲ್ಲುಬಂಡೆಯಂತೆ ಕುಳಿತಿದ್ದಳು. ಭೀಕರ ಮಬ್ಬು, ಯಾರಿಗೂ ಯಾರೊಬ್ಬರು ಕಾಣುತ್ತಿರಲಿಲ್ಲ.

ಸರ್ಕಾರಿ ಆಸ್ಪತ್ರೆ ಮುಂದೆ ವ್ಯಾನ್ ನಿಂತಿತು. ವೀರೇಂದ್ರ ಕುಲಕರ್ಣಿಯ ಚೇಲಗಳು ನಿಂತುಕೊಂಡು ಹೆಣ್ಣಾಳುಗಳನ್ನು ಎಣಿಸಿಕೊಳ್ಳುತ್ತಾ ಒಳಗೆ ಬಿಡತೊಡಗಿದರು, ಒಂದು ಅಂಕೆ ತಪ್ಪಿತು. ಗುಸುಗುಸು ಆರಂಭಗೊಂಡಿತು, 'ಯಾರು, ಯಾರು ತಪ್ಪಿಸಿಕಂಡಿರೋರು?' ಯಾರೋ ಒಬ್ಬಳು ಕೇಳಿದಳು. 'ಭೀಮವ್ವ' ಧ್ವನಿ ಉಡುಗಿದ ಉತ್ತರ. 'ಅದೇ ಮಾಂತೇಶನ ಹೆಣ್ತಿ' ಮತ್ತೊಂದು ದೃಢಪಡಿಸಿದ ಹೇಳಿಕೆ. 'ಚಿನಾಲಿನ ಹುಡ್ಕಿ ಸಿಗ್ದುಹಾಕ್ಬೇಕು' ಗಂಡಸಿನ ಅಬ್ಬರದ ಆದರೆ ತಣ್ಣಗಿನ ಸ್ವರ. ಮತ್ತದೇ ಅರ್ಜಿಯ ಮೇಲೆ ಸಹಿ ಮತ್ತು ಹೆಬ್ಬೆಟ್ಟಿನ ಗುರುತುಗಳು ಬೀಳತೊಡಗಿದವು. ಆ ಸಲ ಹುಟ್ಟಬಹುದಾದ ಕೂಸುಗಳು ನೀರಾಗಿಹೋಗಿದ್ದರೆ ಈ ಬಾರಿ ಸೃಷ್ಟಿಯ ಒರತೆಯನ್ನೇ ಬುಡಸಮೇತ ಮೀಟುವ ಕಾರ್ಯ ನಡೆಯತೊಡಗಿತು. ಯುದ್ಧಭೂಮಿಯಿಂದ ಅಳಿದುಳಿದ ದೇಹದ ಅಂಗಾಂಗಗಳೊಂದಿಗೆ ತಮ್ಮ ಮನೆಯ ಕಡೆ ಹಿಂತಿರುಗುವ ಸೈನಿಕರಂತೆ ಹತ್ತಿ ತೋಟದ ಹೆಣ್ಣಾಳುಗಳು ವ್ಯಾನ್ ಹತ್ತತೊಡಗಿದರು.

ಮಹಾಂತೇಶ ಇನ್ನೂ ಕಣ್ಣು ಬಿಟ್ಟಿರಲಿಲ್ಲ, ಜೈಪುರದ ಕಾಲು ದೊರಕಿ ತಾನು ಓಡಾಡಬಹುದಾದ ಮುಂದಿನ ದಿನಗಳನ್ನು ನೆನೆಸಿಕೊಂಡು ದೀರ್ಘ ನಿದ್ದೆಯಲ್ಲಿದ್ದ. ಅಗುಳಿ ಹಾಕದ ಬಾಗಿಲು ದಢಾರನೆ ತೆರೆದುಕೊಂಡಿತು, ಅವನ ಕಣ್ಣೆದುರಿಗೆ ವೀರೇಂದ್ರ ಕುಲಕರ್ಣಿಯ ಗಂಡಾಳುಗಳು ನಿಂತಿದ್ದರು. ಅವರ ಕೈಗಳಲ್ಲಿ ದೊಣ್ಣೆ, ಕುಡಗೋಲು, ಮಚ್ಚು ಝಳಪಿಸುತ್ತಿದ್ದವು. 'ದುಡ್ಡೇನೂ ಸುಮ್ನೆ ಬತ್ತದ, ಎಲ್ಲೋ ಅವ್ಳು?' ಆ ದನಿಗೆ ಮಹಾಂತೇಶ ಬೆದರಿಹೋಗುವವನು. 'ಯಾರು, ಯಾರು ಬೇಕಣ ನಿಮ್ಗೆ?' ಕೇಳಿದ್ದೇ, 'ಈ ಕಾಲು ಇಟ್ಕಂಡು ಏನೋ ಮಾಡ್ತೀಯ?' ಕೇಳುತ್ತಲೇ ಮತ್ತೊಬ್ಬ ಅವನ ಉಳಿದ ಮತ್ತೊಂದು ಕಾಲನ್ನು ಮಚ್ಚಿನಿಂದ ತುಂಡರಿಸಿದ, ಅಷ್ಟೇ.

* * *

ಇತ್ತ ಯಾರಿಗೂ ಗೊತ್ತಾಗದಂತೆ ಕಳ್ಳಬೆಕ್ಕಿನಂತೆ ವ್ಯಾನ್‌ನಿಂದ ಜಿಗಿದ ಭೀಮವ್ವ, ಗುಡ್ಡಗಾಡು ರಸ್ತೆಯನ್ನು ಬಿಟ್ಟು ಅಡ್ಡರಸ್ತೆಗಳನ್ನು ಹಿಡಿದಿದ್ದಳು. ಹೇಗೆ ಓಡಿದಳು, ಯಾವ ದಿಕ್ಕೆಂದರೆ ಆ ದಿಕ್ಕಿಗೆ ಎಡವಿ ಬೀಳುತ್ತಾ ಮುಂದೆ ಸಾಗತೊಡಗಿದಳು. ಯಾವ ಊರು, ಯಾವ ಜನ ಏನೂ ಗೊತ್ತಿಲ್ಲ. ಚಿಕ್ಕಂದಿನಲ್ಲಿ ಹುರಳಿಹೊಲದಲ್ಲಿ ಓಡಿದಂತೆಯೇ ದೌಡಾಯಿಸಿದ್ದಳು. ಯಾರೋ ಪುಣ್ಯಾತ್ಮ ಇವಳ ಸ್ಥಿತಿಯನ್ನು ನೋಡುತ್ತಲೇ ಟ್ರಕ್ ಹತ್ತಿಸಿಕೊಂಡು ಸರ್ಕಾರಿ ಹೆರಿಗೆ ಆಸ್ಪತ್ರೆತನಕ ಬಿಟ್ಟುಕೊಟ್ಟಿದ್ದ. ನೋವು ತಾಳಲಾರದೆ ಜ್ಞಾನ ತಪ್ಪಿದ್ದಳು. ಎದ್ದ ಎಷ್ಟೋ ಹೊತ್ತಿಗೆ ಗೊತ್ತಾಗಿದ್ದು ತನ್ನ ಹೊಟ್ಟೆಯಲ್ಲಿದ್ದ ಮಗು ತೀರಿಕೊಂಡಿದೆಯೆಂದು. ಬೀಸೋ ದೊಣ್ಣೆಯಿಂದ ತಪ್ಪಿಸಿಕೊಂಡರೆ ಸಾವಿರ ಆಯುಷ್ಯ ಎಂಬಂತೆ ಆದ ಪ್ರಮಾದದ ಕುರಿತು ತೀವ್ರವಾಗಿ ತಲೆ ಕೆಡಿಸಿಕೊಳ್ಳದೆ ರೈಲ್ವೆ ಸ್ಟೇಷನ್ನಿಗೆ ಬಂದಳು. ದುರ್ಗಮ ಪ್ರಾಂತ್ಯ. ಕಲ್ಲುಬೆಂಚಿನ ಮೇಲೆ ಕುಳಿತುಕೊಂಡಳು, ನಿದ್ರೆ ಹತ್ತತೊಡಗಿತು. ಎಲ್ಲಿಗೆ ಹೋಗುವುದು, ತೌರುಮನೆಗೆ ಬೀಗ ಬಿದ್ದು ಎಷ್ಟೋ ಕಾಲ ಸವೆದಿದೆ, ಇನ್ನೂ ಗಂಡನ ಮನೆ ರಕ್ತ ಪ್ರಪಾತದಂತೆ ಬಿಂಬಿತಗೊಳ್ಳುತ್ತಿದೆ. ತಾನು ಕುಳಿತ ಬಲಗಡೆ ಕಣ್ಣಾಯಿಸದೆ, ಎಡಗಡೆ ವಾಲಿದಳು, ಕಣ್ಣುಗಳನ್ನು ಹೂ ಅರಳಿಸುವಂತೆ ಅರಳಿಸುತ್ತಾ; ಹೈದರಾಬಾದ್ ಬೋರ್ಡು ಧುತ್ತನೆ ಹೃದಯಕ್ಕೆ ಬಡಿಯಿತು. ನಾಲ್ಕೂ ದಿಕ್ಕುಗಳು ದಹನವಾಗಿ, ರಕ್ತದ ಹಾದಿಗಳಾಗಿ, ಹಿಡಿದ ಉಡದ ಹಟದಂತೆ ನರನಾಡಿಗಳಲ್ಲಿ ಹೆಣೆದುಕೊಳ್ಳತೊಡಗಿತು. ●